# ಸೆನ್ಸಾರ್ ಇದ್ದರೂ ಬದಲಾವಣೆ ಆಗದು



ಭರತ್ ಕೆ.ಪಿ

ಸ್ಟಾರ್‌ಸುವರ್ಣದ 'ಜಸ್ಟ್ ಮಾತ್ ಮಾತಲ್ಲಿ'ಯ ಯಶ್

★ *ಟಿವಿಯಲ್ಲಿಯು ಸೆನ್ಸಾರ್ ಇರಬೇಕು ಎನ್ನುವ ಹೈಕೋರ್ಟ್ ಆದೇಶದ ಬಗ್ಗೆ ಏನೆನ್ನುತ್ತೀರಿ?*

ಸಿನಿಮಾಗಳಿಗೆ ಇರುವುದು ಸರಿ. ಟಿವಿಗೆ ಅದನ್ನು ಅಳವಡಿಸಿದರೂ ಅಂತಹ ವ್ಯತ್ಯಾಸ ಏನೂ ಆಗದು. ಏಕೆಂದರೆ ಸಿನಿಮಾದಲ್ಲಿ ಹೆಚ್ಚಾನು ಹೆಚ್ಚು ಯುವಕರನ್ನು ಕೇಂದ್ರೀಕರಿಸಿ ಕೆಲವೊಂದು ಗಿಮಿಕ್ ಮಾಡುತ್ತಾರೆ. ಅದರ ನಿಯಂತ್ರಣಕ್ಕೆ ಸೆನ್ಸಾರ್ ಖಂಡಿತ ಅವಶ್ಯ. ಟಿವಿಯಲ್ಲಿ ಅಂತಹ ಯೋಚನೆ ಮಾಡುವುದಿಲ್ಲ. ಒಂದು ಕುಟುಂಬದ ಎಲ್ಲಾ ಸದಸ್ಯರು ನೋಡುತ್ತಾರೆ ಎನ್ನುವ ಪ್ರಜ್ಞೆ ಈಗಾಗಲೇ ಸೆನ್ಸಾರ್ ಮಾಡುತ್ತಿದೆ. ಈ ಕಾರಣಕ್ಕೆ ಸಭ್ಯತೆಗೆ ಹೆಚ್ಚು ಒತ್ತುಕೊಟ್ಟಿರುತ್ತಾರೆ. ಎಲ್ಲಾ ವಯೋಮಾನದವರು ಟಿವಿ ವೀಕ್ಷಿಸುತ್ತಾರೆ. ಹಾಗಾಗಿ ಪ್ರತಿ ದೃಶ್ಯದ ಬಗ್ಗೆಯೂ ಜಾಗರೂಕತೆ ವಹಿಸುತ್ತಾರೆ. ಇತ್ತೀಚೆಗೆ ಇಂತಹ ಸಭ್ಯತೆಯನ್ನು ಮೀರಿದ ಸಂದರ್ಭಗಳೂ ಇರಬಹುದು. ಇದೇ ಕಾರಣಕ್ಕೆ ಕೋರ್ಟ್ ಅಭಿಪ್ರಾಯಪಟ್ಟಿರಬಹುದು. ಸೆನ್ಸಾರ್ ಬಂದರೂ ಹೆಚ್ಚಿನ ವ್ಯತ್ಯಾಸ ಆಗುವುದಿಲ್ಲ.

★ *ಲವ್ ಸ್ಟೋರಿ ಎಲ್ಲಿಗೆ ಬಂದಿದೆ? ಮತ್ತೆ ಜಗಳ ಆಗಿಲ್ವಾ?*

ಸದ್ಯ ಜಗಳ ಇಲ್ಲ. ಈಗ ನಿಶ್ಚಿತಾರ್ಥ ನಡೆಯುವ ಸಂದರ್ಭ. ಹೊಂದಾಣಿಕೆಯ ಬೆಸುಗೆ ಗಟ್ಟಿಯಾಗಿದೆ. ಜಗಳಕ್ಕೆನೂ ಮುಹೂರ್ತ ಇಡಬೇಕಿಲ್ಲ. ಜಸ್ಟ್ ಮಾತ್ ಮಾತಲ್ಲೇ ಆಗುತ್ತದೆ. ಇಬ್ಬರ ಪ್ರೀತಿಯ ಗುಟ್ಟೆ ಅಂತಹದ್ದು. ಸ್ನೇಹದಿಂದ ಕೂಡಿ ಪ್ರೀತಿಯಿಂದ ಮಾತನಾಡುತ್ತಲೇ, ಮಾತಿಗೆ ಮಾತು ಬೆಳೆಸಿ ಜಗಳವಾಡಿ ದೂರವಾಗುತ್ತೇವೆ. ಒಂಥರಾ ಮಜಾ ಇದೆ.

★ *ಹೇಗೆನಿಸುತ್ತಿದೆ ಬದುಕಿನ ಪಲ್ಲಟಗಳು?*

ಚೆನ್ನಾಗಿದೆ. ತುಂಬಾ ಖುಷಿ ಆಗ್ತಾ ಇದೆ. ನನ್ನ ಬದಲಾವಣೆಯ ಎಲ್ಲಾ ಹೆಜ್ಜೆಗಳು ನನ್ನವೇ ಅಲ್ವಾ? ಅದನ್ನು ಅನುಭವಿಸುತ್ತೇನೆ. ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದೆ. ಏಕೋ ಏಕತಾನತೆ ಅನ್ನಿಸಿತು. ಕೆಲಸ ಬಿಟ್ಟು ಅರೆಕಾಲಿಕ ಫ್ಯಾಷನ್ ಡಿಸೈನ್ ಮಾಡಲು ಆರಂಭಿಸಿದೆ. ಅಷ್ಟರ ನಡುವೆ ನಟನೆಗೆ ಅವಕಾಶ ಸಿಕ್ಕಿದೆ. ಅದನ್ನು ಮಾಡುತ್ತಲೇ ಸಮಯ ಸಿಕ್ಕಾಗ ಡಿಸೈನ್‌ಕಡೆ ಗಮನ ಕೊಡುತ್ತೇನೆ. ಸದ್ಯ ಒಂದು ಕಳೆದುಕೊಂಡಿದ್ದೇನೆ. ನನಗೆ ಗ್ರಾಫಿಕ್ ಡಿಸೈನ್ ಕೂಡ ಆಸಕ್ತಿಯ ಸಂಗತಿ. ಅದಕ್ಕಾಗಿ ಒಂದು ಕೋರ್ಸ್ ಸೇರಿದ್ದೆ. ಅದನ್ನು ಅರ್ಧಕ್ಕೆ ಕೈಬಿಟ್ಟಂತೆ ಆಗಿದೆ. ಖಂಡಿತ ಅದನ್ನು ಮುಗಿಸಬೇಕು. ಗ್ರಾಫಿಕ್‌ನಲ್ಲಿ ಈಗಲೇ ಕೆಲಸ ಮಾಡುವ ಚಾಣಾಕ್ಷತೆ ಇದೆ. ಆದರೂ ಅದನ್ನು ಮತ್ತಷ್ಟು ಕಲಿಯಬೇಕು ಎಂಬ ಹಂಬಲ ಇದೆ. ಖಂಡಿತ ಅದನ್ನೂ ಪೂರೈಸುತ್ತೇನೆ.

★ *ನಟನೆ ತುಂಬಾ ಸುಲಭನಾ?*

ನಟನೆ ಬಗ್ಗೆ ನನಗೆ ಗೊತ್ತಿರಲಿಲ್ಲ. ಎಲ್ಲಾ ಇಲ್ಲಿಗೆ ಬಂದ ಮೇಲೆ ಕಲಿಯುತ್ತಿದ್ದೇನೆ. ಆಡಿಷನ್‌ಗೆ ಬಂದೆ. ಸೆಲೆಕ್ಟ್ ಮಾಡಿದರು. ಆನಂತರದ ದಿನಗಳು ನನಗೆ ಸವಾಲಿನ ದಿನಗಳಾದವು. ನಟನೆಯ ಗ್ರಾಮರ್ ಏನೆಂದು ಅರಿಯದ ನನಗೆ ನಿರ್ದೇಶಕ ದಿಲೀಪ್ ತುಂಬಾ ತಾಳ್ಮೆಯಿಂದ ಕಲಿಸಿಕೊಟ್ಟರು. ಕೆಲವು ದಿನ ನನಗಾಗಿ ಕಾರ್ಯಾಗಾರ ಮಾಡಿದರು. ನಂತರ ಬಣ್ಣ ಹಚ್ಚಿದರು. ಈಗ ಪರ್ವಾಗಿಲ್ಲ ಎನ್ನುವಂತೆ ನನಗೆ ಆತ್ಮವಿಶ್ವಾಸ ಬಂದಿದೆ. ಆರಂಭದ ದಿನಗಳ ನಟನೆಯನ್ನು ನೋಡಿದರೆ ಅಯ್ಯೋ ನಾನೆಷ್ಟು ಬದಲಾಗಿದ್ದೇನೆ, ಕಲಿತಿದ್ದೇನೆ ಎಂದು ಬೆರಗಾಗುತ್ತೇನೆ. ಇನ್ನೂ ಕಲಿಯುವುದು ತುಂಬಾ ಇದೆ. ಆಮೇಲೆ ಸಿನಿಮಾ ಮಾಡುವುದು ಬಾಕಿ ಇದೆ.

■ ರಾಗು